ವಿದ್ಯುತ್ ಪ್ರಮಾಣದ ಪ್ರತಿ ಯೋಜನೆಗಳ ಕುರಿತು

೧೪೧೯. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯದಲ್ಲಿ ವಿವಿಧ ಮೂಲಗಳಿಂದ ದೊರೆಯುತ್ತಿರುವ ವಿದ್ಯುತ್ತಿನ ಪ್ರಮಾಣ ಎಷ್ಟು ? (ಪ್ರತಿ ಯೋಜನೆಗಳ ವಿವರಗಳು).

ಆ) ಹೊರ ರಾಜ್ಯಗಳಿಂದ ಪಡೆಯುತ್ತಿರುವ ವಿದ್ಯುತ್ತಿನ ಪ್ರಮಾಣವೆಷ್ಟು ?

ಇ) ಕೇಂದ್ರ ಸರ್ಕಾರದ ಯೋಜನೆಗಳಿಂದ ರಾಜ್ಯದ ಪಾಲಾಗಿ ಪಡೆಯುತ್ತಿರುವ ವಿದ್ಯುತ್ತಿನ ಪ್ರಮಾಣವೆಷ್ಟು ?

ಈ) ರಾಜ್ಯದಲ್ಲಿ ಪ್ರಸ್ತುತ, ಗ್ರಾಹಕರಿಗೆ ಕೈಗಾರಿಕೆಗಳಿಗೆ, ನೀರಾವರಿ ಪಂಪುಸೆಟ್ಟುಗಳಿಗೆ ಬೇಕಾಗುವ ವಿದ್ಯುತ್ತಿನ ಪ್ರಮಾಣವೆಷ್ಟು ?

ಉ) ಪ್ರಸ್ತುತ ರಾಜ್ಯ ಎದುರಿಸುತ್ತಿರುವ ಕೊರತೆಯ ಪ್ರಮಾಣವೆಷ್ಟು ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

ಅ) ಕರ್ನಾಟಕ ರಾಜ್ಯದಲ್ಲಿ ವಿವಿಧ ಮೂಲಗಳಿಂದ ಈಗ ದಿನವಹಿ ೩೦.೩೩ ದಶಲಕ್ಷ ಯೂನಿಟ್ಟುಗಳಷ್ಟು ವಿದ್ಯುಚ್ಛಕ್ತಿ ದೊರೆಯುತ್ತಿದೆ (ವಿವರ ಅನುಬಂಧದಲ್ಲಿ ನೀಡಿದೆ).

ಆ) ಮಹಾರಾಷ್ಟ್ರದಿಂದ ರಾಜ್ಯವು ದಿನವಹಿ ಸುಮಾರು ೪ ದಶಲಕ್ಷ ಯೂನಿಟ್ಟುಗಳಷ್ಟು ವಿದ್ಯುತ್ತಿನ ನೆರವು ಪಡೆಯುತ್ತಿದೆ.

ಇ) ಕೇಂದ್ರ ಸರ್ಕಾರದ ಯೋಜನೆಗಳಿಂದ ರಾಜ್ಯವು ಪಾಲಿ ತನ್ನ ಪಾಲು ಮತ್ತು ಹೆಚ್ಚುವರಿ ಉಳಿದ ಭಾಗದಲ್ಲಿನ ಹೆಚ್ಚುವರಿ ಹೆಚ್ಚಿಕೆಯ ಬಾಬ್ತು ೩೩೧.೫೫ ಮೆ.ವಾಟ್ಸ್ ವಿದ್ಯುತ್ತನ್ನು ಪಡೆಯುತ್ತಿದೆ.

ರಾಜ್ಯವು ೧೯೮೮ನೇ ಏಪ್ರಿಲ್ ಮಾಹೆಯಲ್ಲಿ ಕೇಂದ್ರದ ಯೋಜನೆಗಳಿಂದ ೧೨೦.೬೬ ದಶಲಕ್ಷ ಯೂನಿಟ್‌ಗಳನ್ನು ಪಡೆಯಿತು.

ಈ) ರಾಜ್ಯದಲ್ಲಿ ೧೯೮೮-೮೯ನೇ ಸಾಲಿನಲ್ಲಿ ಕೈಗಾರಿಕೆಗಳು, ನೀರಾವರಿ ಪಂಪ್‌ಸೆಟ್ಟುಗಳ ಅನಿಬಂಧಿತ ಬೇಡಿಕೆ ಕೆಳಕಂಡಂತಿದೆಯೆಂದು ಅಂದಾಜು ಮಾಡಲಾಗಿದೆ.

ಕೈಗಾರಿಕೆಗಳು	...	ಎಲ್.ಟಿ, ೧,೦೬೦ ಮಿಲಿಯನ್ ಯೂನಿಟ್ಟುಗಳು
	...	ಹೆಚ್.ಟಿ, ೭,೯೭೫ ಮಿಲಿಯನ್ ಯೂನಿಟ್ಟುಗಳು
ಒಟ್ಟು	...	೯,೦೩೫ ದಶಲಕ್ಷ ಯೂನಿಟ್ಟುಗಳು.
ನೀರಾವರಿ ಪಂಪುಸೆಟ್ಟುಗಳು	...	೨,೫೮೮ ದಶಲಕ್ಷ ಯೂನಿಟ್ಟುಗಳು

ಊ) ರಾಜ್ಯದಲ್ಲಿನ ೧೯೮೮-೮೯ ರಲ್ಲಿನ ಅಂದಾಜಿನ ವಿದ್ಯುತ್ ಕೊರತೆ ೪,೦೫೫ ದಶಲಕ್ಷ ಯೂನಿಟ್ಟುಗಳು (ಇದು ಸಾಮಾನ್ಯ ಮುಂಗಾರು ಮಳೆಯನ್ನಾಧರಿಸಿದೆ ಮುಂಗಾರು ಕಡಿಮೆಯಾದಲ್ಲಿ ಕೊರತೆ ಹೆಚ್ಚುತ್ತದೆ.

ಅನುಬಂಧ

ಕರ್ನಾಟಕ ರಾಜ್ಯದಲ್ಲಿ ಈಗ ವಿವಿಧ ಮೂಲಗಳಿಂದ ದಿನವಹಿ ದೊರೆಯುತ್ತಿರುವ ವಿದ್ಯುತ್ತಿನ ಪ್ರಮಾಣದ ವಿವರ.

ಕ್ರಮ ಸಂಖ್ಯೆ	ವಿವರ	ವಿದ್ಯುತ್ತಿನ ಪ್ರಮಾಣ (ದಶಲಕ್ಷ ಯೂನಿಟ್ಟುಗಳಲ್ಲಿ)
೧	೨	೩
೧	ರಾಜ್ಯದಲ್ಲಿನ ಆಂತರಿಕ ವಿದ್ಯುತ್ ಉತ್ಪಾದನೆಯಿಂದ:	
	ಅ) ಜಲವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ	೧೫.೩೩
	ಆ) ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದಿಂದ	೬.೦೦
೨	ಮಹಾರಾಷ್ಟ್ರದಿಂದ	೪.೦೦
೩	ಕೇಂದ್ರ ಸರ್ಕಾರದ ಯೋಜನೆಗಳಿಂದ	೫.೦೦
	ಒಟ್ಟು	೩೦.೩೩

ಅರಣ್ಯಗಳಲ್ಲಿರುವ ಮೃಗಚರಗಳ ಸಂಖ್ಯೆ ಕುರಿತು

೧೬೭೮. ಶ್ರೀ ಪಿ. ಎಂ. ಚಿಕ್ಕ ಬೋರಯ್ಯ (ಚಾಮರಾಜ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಈಗ ಎಷ್ಟು ಅಭಯಾರಣ್ಯಗಳು ಇವೆ ಅವು ಎಲ್ಲೆಲ್ಲಿ ಇವೆ ?

ಆ) ಅವುಗಳಲ್ಲಿರುವ ಮೃಗಚರಗಳ ಸಂಖ್ಯೆ ಹಾಗೂ ಅರಣ್ಯಗಳ ವಿಸ್ತೀರ್ಣವೆಷ್ಟು ?

ಇ) ವನಸಿರಿ ಹೆಚ್ಚಿಸಲು ಕೈಗೊಳ್ಳಲು ಹವಣಿಸಿರುವ ವಿಶೇಷ ಯೋಜನೆಗಳಾವುವು ?

ಶ್ರೀ ಜಿ. ಎಸ್. ಬಾಗಲಕೋಟ್ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ರಾಜ್ಯದಲ್ಲಿ ಒಟ್ಟು ೧೮ ಅಭಯಾರಣ್ಯ ಮತ್ತು ಐದು ರಾಷ್ಟ್ರೀಯ ಉದ್ಯಾನವನಗಳಿದ್ದು ಅವು ಮೈಸೂರು, ಬೆಂಗಳೂರು, ದಕ್ಷಿಣ ಕನ್ನಡ ಉತ್ತರ ಕನ್ನಡ, ಶಿವಮೊಗ್ಗ, ಮಡಿಕೇರಿ, ಧಾರವಾಡ ಬೆಳಗಾಂ ಜಿಲ್ಲೆಗಳಲ್ಲಿವೆ.

ವಿಸ್ತೀರ್ಣ ಈ ಕೆಳಗಿನಂತಿವೆ.

೧	ರಾಷ್ಟ್ರೀಯ ಉದ್ಯಾನವನ	ಜಿಲ್ಲೆ	ಚ.ಕಿ.ಮೀ.
	ಅ) ಅನ್ಶಿ	ಉತ್ತರ ಕನ್ನಡ ಜಿಲ್ಲೆ	೨೫೦.೦೦
	ಆ) ಬಂಡೀಪುರ	ಮೈಸೂರು	೮೭೪.೨೦
	ಇ) ಬನ್ನೇರುಘಟ್ಟ	ಬೆಂಗಳೂರು	೧೦೪.೨೭
	ಈ) ಕುದುರೆಮುಖ	ದಕ್ಷಿಣ ಕನ್ನಡ ಚಿಕ್ಕಮಗಳೂರು	೬೦೦.೩೨
	ಉ) ನಾಗರಹೊಳೆ	ಮೈಸೂರು ಮತ್ತು ಮಡಿಕೇರಿ.	೫೭೧.೫೫